ಚಿತ್ತ ಕೆತ್ತಿದ ಚಿತ್ರ

# ಕಿವಿಯ ಬಳಿಯೇ ದುಡಿ ಬಾರಿಸುವ 'ಚೋಮ'



ಫಾತಿಮಾ ರಲಿಯಾ

ಕಲೆ: ಮುರಳೀಧರ್ ರಾಥೋಡ್

ಮೊದಲ ಬಾರಿ 'ಚೋಮನ ದುಡಿ' ಓದಿ ಪುಸ್ತಕ ಮುಚ್ಚಿಟ್ಟಾಗ ಚೋಮ ಕಿವಿಯ ಪಕ್ಕದಲ್ಲಿ ಕೂತು ದುಡಿ ಬಾರಿಸುತ್ತಿರುವ ಭಾವ. ನನ್ನ ನೆಲದ ಭೂತಕಾಲದ, ವರ್ತಮಾನದ ಮತ್ತು ಭವಿಷ್ಯದಲ್ಲಿ ಎಲ್ಲೂ ಸಂಪೂರ್ಣವಾಗಿ ತೆಗೆದು ಹಾಕಲು ಸಾಧ್ಯವಿಲ್ಲದ ಜಾತಿ ವ್ಯವಸ್ಥೆಯ ಅಂತಿಮ ಕೊಂಡಿಯಲ್ಲಿ ನಿಂತಿರುವ ಆಪ್ತ ಜೀವವೆಂಬಂತೆ ಅವನು ಭಾಸವಾಗಿದ್ದ.

'ಚೋಮನ ದುಡಿ' ನಾನು ಓದಿದ ಮೊದಲ ಮೌಲಿಕ ಕೃತಿ. ಶಿವರಾಮ ಕಾರಂತರ ಹೆಸರು ಕೇಳುವಾಗೆಲ್ಲಾ ನನಗೆ ಮೊದಲು ನೆನಪಿಗೆ ಬರುವುದು ಚೋಮನೇ. ಮೊದಲ ಓದಿಗೆ ಚೋಮ ಚೌಕುಳಿ ಗೆರೆಯ ಲುಂಗಿಯನ್ನು ಮಂಡಿಗಿಂತ ನಾಲ್ಕು ಇಂಚು ಮೇಲೆ ಎತ್ತಿ ಕಟ್ಟಿ ದಣಿ ಸಂಕಪ್ಪಯ್ಯನವರ ಮನೆಯಲ್ಲಿ ಕೆಲಸ ಮಾಡುತ್ತಾ, ಸಂಜೆಯಾಗುತ್ತಿದ್ದಂತೆ ಬೀರನ ಹೆಂಡದಂಗಡಿಯಲ್ಲಿ ಕುಡಿದು ಬೀಳುವ ವ್ಯಕ್ತಿಯಾಗಿ ದಕ್ಕಿದ್ದ. ಅದರಾಚೆಗಿದ್ದ ಅವನ ವ್ಯಕ್ತಿತ್ವ ದಕ್ಕಿದ್ದು ಓದು ಮುಗಿಸಿ ದುಡಿ ಮನಸ್ಸಿನೊಳಗಡೆ ಡಮರುಗ ಪ್ರಾರಂಭಿಸಿದ ಮೇಲೇಯೇ.

ಚೋಮ ನಮ್ಮೊಳಗಿನ ಅವ್ಯಕ್ತ ಪ್ರತಿಭಟನೆಯ, ಪ್ರತಿರೋಧದ, ಸಂಕಟದ, ಬಲವಾದ ಆಕಾಂಕ್ಷೆಯ, ಆಕ್ರೋಶದ, ಭಾವೋದ್ರೇಕದ, ಹತಾಶೆಯ ಪ್ರತೀಕ. ಅಂಗೈಯಲ್ಲಿರುವ ಪುಸ್ತಕದ ಚೋಮ ಒಮ್ಮೆ ಅಲ್ಲಿಂದ ಮೆದುಳಿನಲ್ಲಿ ಹೋಗಿ ಕುಳಿತನೆಂದರೆ ಮತ್ತೆ ಅವನನ್ನು ಅಲ್ಲಿಂದ ಎಬ್ಬಿಸಿ ಆಚೆ ಕಳುಹಿಸಲು ಸಾಧ್ಯವೇ ಇಲ್ಲ. ಒಂದೋ ಅವನು, ಇಲ್ಲವೇ ಅವನ ದುಡಿ 'ಢಮ ಢಮ್ಮ, ಢಕ ಢಕ್ಕ' ಅನ್ನುತ್ತಲೇ ಇರುತ್ತದೆ.

ಹಾಗೆ ನೋಡಿದರೆ ಚೋಮ ನಮ್ಮೆಲ್ಲರ ನಡುವೆಯೇ ಬದುಕುತ್ತಿದ್ದವ, ಆದರೆ ಅವನು ಈ ಕಾದಂಬರಿ ಓದುವ ಮುಂಚೆ ನನ್ನ ಕಣ್ಣಿಗೆ ಬಿದ್ದಿರಲಿಲ್ಲ. ಯಾಕೆಂದರೆ, ನಾನು ಬದುಕುತ್ತಿದ್ದ ಸಾಮಾಜಿಕ, ಆರ್ಥಿಕ, ಸಾಮುದಾಯಿಕ, ಸಾಂಸ್ಕೃತಿಕ ಕಾಲಮಾನದಲ್ಲಿ ಅವನು ನನ್ನ ಕಣ್ಣಿಗೆ ಬೀಳಲು ಸಾಧ್ಯವೂ ಇರಲಿಲ್ಲ. ಹಾಗಾಗಿಯೇ ಚೋಮ ನನ್ನೊಳಗೆ ಇಂತಹಾ ದಿಗ್ಭ್ರಮೆ ಮತ್ತು ಇಷ್ಟು ದೀರ್ಘಕಾಲೀನ ತಲ್ಲಣಗಳನ್ನು ಹುಟ್ಟಿಸಿದ್ದು.

ಚೋಮನ ದುಡಿ ಕಾದಂಬರಿಯನ್ನು ನಾನು ಮೊದಲ ಬಾರಿ ಓದಿದಾಗ ಎಂಟನೇ ತರಗತಿಯಲ್ಲಿದ್ದೆ. ದುಡಿಯ ಬಡಿತದೊಂದಿಗೆ ಶುರುವಾಗುವ ಕಥೆ ನರನಾಡಿಗಳೆಲ್ಲಾ ಹರಿದು ಮತ್ತೆ ದುಡಿಯ ಶಬ್ದದೊಂದಿಗೇ ಅಂತ್ಯವಾದಾಗ ಮೊದಲು ಕಾಡಿದ್ದು ದಟ್ಟ ವಿಷಾದ, ಆಮೇಲೆ ಕಡು ನಿರಾಸೆ. ಯಾಕೆಂದರೆ ನಾನು ಅದುವರೆಗೆ ಅಂಥದ್ದೊಂದು ಜೀವನಕ್ಕೆ ಮುಖಾಮುಖಿಯಾಗಿರಲೇ ಇಲ್ಲ.

ಆ ಪುಟ್ಟ ಪುಸ್ತಕ ಓದಿ ಮುಗಿಸಿದ ಮೇಲೆ ಅಡುಗೆ ಮನೆಯ ಕಟ್ಟೆಯ ಮೇಲೆ ಕೂತು 'ಚೋಮನಂಥಾ ಬದುಕೂ ಇರುತ್ತದಾ?' ಎಂದು ಅಮ್ಮನನ್ನು ಕೇಳಿದ್ದೆ. 'ಹುಂ' ಅಂದು ಸುಮ್ಮನಾಗಿದ್ದರು. 'ಅಲ್ಲ ಕಾರಂತರು ಸುಮ್ಮನೆ ವೈಭವೀಕರಿಸಿದ್ದಾ?' ಮತ್ತೆ ಕೇಳಿದ್ದೆ. ಇಂಥದ್ದೊಂದು ಪ್ರಶ್ನೆಯೊಂದಿಗೆ ನಾನು ಬಂದೇ ಬರುತ್ತೇನೆ ಎಂದು ಆ ಪುಸ್ತಕವನ್ನು ಕೈಗೆತ್ತಿಕೊಂಡಾಗಲೇ ಅಮ್ಮನಿಗೆ ಅನ್ನಿಸಿತ್ತೋ ಏನೋ, 'ನಮ್ಮನೆ ಗೇಟಿನ ಹೊರಗೆ ತುಂಬಾ ವಿಶಾಲವಾದ ಪ್ರಪಂಚ ಇದೆ, ಅದನ್ನು ಪುಸ್ತಕ ಓದದೆಯೇ ನೀನು ನೋಡಲು ಕಲಿಯಬೇಕು'